2. ಪ್ರಶ್ನೋತ್ತರ :

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು.

ತೋಟಗಾರಿಕೆ ಇಲಾಖೆಗೆ ಸ್ವಂತ ಕಟ್ಟಡಗಳು

61 (238) ಶ್ರೀ ಸುನೀಲ್. ವಿ. ಹೆಗಡೆ (ಹಳಿಯಾಳ) : ಮಾನ್ಯ ಸಕ್ಕರೆ ಮತ್ತು ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಳಿಯಾಳ ಮತ್ತು ಜೋಯಿಡಾ ತಾಲ್ಲೂಕಿನಲ್ಲಿ ಇರುವ ತೋಟಗಾರಿಕಾ ಇಲಾಖೆಯು ಸ್ವಂತ ಕಟ್ಟಡಗಳನ್ನು ಹೊಂದಿದೆಯೇ (ವಿವರ ಗಳನ್ನು ನೀಡುವುದು);

ಆ) ಹಾಗಿಲ್ಲದಿದ್ದಲ್ಲಿ, ಸ್ವಂತ ಕಟ್ಟಡವನ್ನು ನಿರ್ಮಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಇ) ತೋಟಗಾರಿಕೆ ಇಲಾಖೆಯಲ್ಲಿ ಸಿಬ್ಬಂದಿಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ ಕೊರತೆ ಇರುವ ಸಿಬ್ಬಂದಿಗಳನ್ನು ತುಂಬಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು (ಮಾಹಿತಿ ನೀಡುವುದು);

ಉ) ಹಾಗಿದ್ದಲ್ಲಿ ಯಾವಾಗ ತುಂಬಲಾಗುವುದು?

ಶ್ರೀ ಎಸ್.ಎ. ರಾಮದಾಸ್ (ಸಕ್ಕರೆ ಮತ್ತು ತೋಟಗಾರಿಕೆ ಸಚಿವರು) :

ಅ) ಹಳಿಯಾಳ ಮತ್ತು ಜೋಯಿಡಾ ತಾಲ್ಲೂಕುಗಳಲ್ಲಿ ತೋಟ ಗಾರಿಕಾ ಇಲಾಖೆಯು ಕೆಳಕಂಡ ಸ್ವಂತ ಕಟ್ಟಡಗಳನ್ನು ಹೊಂದಿರುತ್ತದೆ.

ಹಳಿಯಾಳ ತಾಲ್ಲೂಕು :

1. ಹಳಿಯಾಳ ತಾಲ್ಲೂಕಿನಲ್ಲಿ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರವರ ಕಛೇರಿ.
2. ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ಹಳಿಯಾಳ ರವರ ವಸತಿ ಗೃಹ ಕಟ್ಟಡ
3. ಹಳಿಯಾಳ ತಾಲ್ಲೂಕಿನ ಬಾಣಸಗೆರೆ ತೋಟಗಾರಿಕೆ ಕ್ಷೇತ್ರದ ಕಚೇರಿ ಮತ್ತು ದಾಸ್ತಾನು ಕೊಠಡಿ

ಜೋಯಿಡಾ ತಾಲ್ಲೂಕು :

1. ಜೋಯಿಡಾ ತಾಲ್ಲೂಕಿನಲ್ಲಿ ಸಹಾಯಕ ತೋಟಗಾರಿಕೆ ನಿರ್ದೇಶಕರವರ ಕಛೇರಿ.
2. ಜೋಯಿಡಾ ತಾಲ್ಲೂಕಿನಲ್ಲಿ ಸಹಾಯಕ ತೋಟಗಾರಿಕೆ ನಿರ್ದೇಶಕರವರ ಕಛೇರಿಗೆ ದಾಸ್ತಾನು ಕೊಠಡಿ
3. ಜೋಯಿಡಾ ತಾಲ್ಲೂಕಿನ ರಾಮನಗರ ತೋಟಗಾರಿಕೆ ಕ್ಷೇತ್ರದ ಕಛೇರಿ ಮತ್ತು ದಾಸ್ತಾನು ಕೊಠಡಿ.

Horticulture Department has own buildings at Haliyal and Joida taluks.

HALIYAL TALUK

1. Office of the Senior Assistant Director of Horticulture-Haliyal
2. Quarters of the Senior Assistant Director of Horticulture-Haliyal
3. Office and godown at Banasagere Horticulture farm.

JOIDA TALUK

1. Office of the Assistant Director of Horticulture – Joida
2. Godown at Assistant Director of Horticulture office-joida
3. Office and godown at Ramanagara horticulture farm

ಆ) ಉದ್ಭವಿಸುವುದಿಲ್ಲ.

Do not arise.

ಇ) ಹೌದು.

Yes.

ಈ) ತೋಟಗಾರಿಕೆ ಇಲಾಖೆಯಲ್ಲಿ ಖಾಲಿ ಇರುವ ಈ ಕೆಳಕಂಡ ವೃಂದದ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಬಗ್ಗೆ ಪ್ರಸ್ತಾವನೆ ಪರಿಶೀಲಿಸಿ ಆರ್ಥಿಕ ಇಲಾಖೆಯ ಸಹಮತಿ ಪಡೆಯಲು ಕ್ರಮ ಕೈಗೊಳ್ಳಲಾಗುತ್ತಿದೆ.

1) ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು – 18

2) ಸಹಾಯಕ ತೋಟಗಾರಿಕೆ ನಿರ್ದೇಶಕರು – 47

3) ಸಹಾಯಕ ತೋಟಗಾರಿಕೆ ಅಧಿಕಾರಿಗಳು – 246

4) ತೋಟಗಾರಿಕೆ ಸಹಾಯಕರು – 238

5) ತೋಟಗಾರರು – 331

6) ಪ್ರಥಮ ದರ್ಜೆ ಸಹಾಯಕರು – 85

7) ದ್ವಿತೀಯ ದರ್ಜೆ ಸಹಾಯಕರು – 30

8) ಶೀಘ್ರಲಿಪಿಗಾರರು – 04

9) ಬೆರಳಚ್ಚುಗಾರರು – 23

Action is being taken to examine the proposal and to fill the vacant posts through direct recruitment.

1) Senior Assistant Director of Horticulture -18
2) Assistant Director of Horticulture - 47
3) Assistant Horticulture Officer - 246
4) Horticulture Assistant - 238
5) Gardner - 331
6) First Division Clerk - 85
7) Second Division Clerk - 30
8) Stenographer - 04
9) Typist - 23

ಉ) ನಿಯಮಾನುಸಾರ ಹುದ್ದೆಗಳನ್ನು ಭರ್ತಿ ಮಾಡಲು ಶೀಘ್ರವಾಗಿ ಕ್ರಮ ಕೈಗೊಳ್ಳಲಾಗುವುದು.

As per rules action will be taken to fill the vacant posts.

ಶ್ರೀ ಸುನಿಲ್ ಎ ಹೆಗಡೆ : ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ. ಜೋಯಿಡಾ ತಾಲ್ಲೂಕು ಹಿಂದುಳಿದ ತಾಲ್ಲೂಕಾಗಿರುವುದರಿಂದ ಅಲ್ಲಿ ತೋಟಗಾರಿಕಾ ಸಹಾಯಕರಿಗೆ, ನಿರ್ದೇಶಕರಿಗೆ ವಸತಿ ಕಟ್ಟಡಗಳ ಅವಶ್ಯಕತೆ ಇದೆ. ಇವರು ಹೇಳಿದಂಥ ರಾಮನಗರ ತೋಟಗಾರಿಕಾ ಕಛೇರಿ ಮತ್ತು ದಾಸ್ತಾನು ಕೊಠಡಿ ಇದ್ದೂ ಇಲ್ಲದ ಹಾಗೆ ಇದೆ. ಏಕೆಂದರೆ ಸಂಪೂರ್ಣವಾಗಿ ಹಾಳಾಗಿದ್ದು ಅದು ಉಪಯೋಗ ಆಗದಂಥ ಪರಿಸ್ಥಿತಿಯಲ್ಲಿದೆ. ಇವತ್ತು ಜೋಯಿಡಾದಲ್ಲಿ ವಸತಿ ಗೃಹದ ಅವಶ್ಯಕತೆ ಬಹಳ ಇದೆ. ಏಕೆಂದರೆ ಅಲ್ಲಿ ಪ್ಯೂನ್‌ನಿಂದ ಹಿಡಿದು ಎ.ಡಿ. ವರೆಗೆ ಒಬ್ಬರೇ ಇದ್ದಾರೆ. ಒಬ್ಬರೇ ಮತ್ತ್ಯಾರೂ ಇಲ್ಲ. one man show ಆಗಿದೆ. ಅವರೂ ಕೂಡ ಯಲ್ಲಾಪುರದಿಂದ ಬರುತ್ತಾರೆ. ಅವರು ಲೋಕಲ್‌ನಲ್ಲಿಯೇ ಇರುವುದಿಲ್ಲ. ಆದಕಾರಣ ಅಲ್ಲಿಯೇ ವಸತಿ ಗೃಹ ಮಾಡಿ ಅವರಿಗೆ ವ್ಯವಸ್ಥೆ ಮಾಡಿಕೊಡ ಬೇಕಾಗುತ್ತದೆ. ಏಕೆಂದರೆ ಜೋಯಿಡಾ ತಾಲ್ಲೂಕಿನಲ್ಲಿ ಅಡಿಕೆ ಬೆಳೆಗಾರರು ಬಹಳ ಇದ್ದಾರೆ. ಅಡಿಕೆ ಬೆಳೆಗೆ ಮೇಲಿಂದ ಮೇಲೆ ಹಲವಾರು ರೀತಿಯ ಸಮಸ್ಯೆಗಳು ಬರುತ್ತಿರುವುದರಿಂದ ತೋಟಗಾರಿಕಾ ಇಲಾಖೆಯ ಮೇಲೆಯೇ ಅವರು ಅವಲಂಬನೆಯಾಗಿದ್ದಾರೆ. ಹಳಿಯಾಳ ಮತ್ತು ಜೋಯಿಡಾ ತಾಲ್ಲೂಕಿನಲ್ಲಿ ಮಾವಿನ ಬೆಳೆ ಅತಿ ಹೆಚ್ಚಿನ ಪ್ರಮಾಣದಲ್ಲಿ ಮತ್ತು ಕಲ್ಲಂಗಡಿ ಬೆಳೆ ಕೂಡ ಅತಿ ಹೆಚ್ಚಿನ ಪ್ರಮಾಣದಲ್ಲಿ ಬೆಳೆಯುವುದರಿಂದ ಮತ್ತು ಈ ಬೆಳೆಗಳೆಲ್ಲವೂ ತೋಟಗಾರಿಕಾ ಇಲಾಖೆಯ ವ್ಯಾಪ್ತಿಗೆ ಬರುವುದರಿಂದ ಅಲ್ಲಿ ಸಿಬ್ಬಂದಿಗಳ ಕೊರತೆ ನೀಗಿಸಬೇಕು ಮತ್ತು ಇದ್ದಂಥ ಕಟ್ಟಡಗಳ ದುರಸ್ತಿಯಾಗದೆ ಇಂದು ಉಪಯೋಗಕ್ಕೆ ಬಾರದೇ ಇರುವ ಪರಿಸ್ಥಿತಿಯಲ್ಲಿರುವುದರಿಂದ ತೋಟಗಾರಿಕೆ ಇಲಾಖೆಯವರು ಅಲ್ಲಿ ಯಾವುದೇ ರೀತಿಯಲ್ಲಿ ಸಮರ್ಪಕವಾಗಿ ಕೆಲಸವನ್ನು ನಿರ್ವಹಿಸುವುದಕ್ಕೆ ಸಾಧ್ಯವಾಗುತ್ತಿಲ್ಲ. ಅದಕ್ಕಾಗಿ ನನ್ನ ವಿನಂತಿ ಇದೆ. ಡಾ: ನಂಜುಂಡಪ್ಪ ವರದಿಯಲ್ಲಿ ಹೇಳಿರುವಂತೆ ನಮ್ಮ ತಾಲ್ಲೂಕು ಹಿಂದುಳಿದ ತಾಲ್ಲೂಕಿನಲ್ಲಿ ಬಂದಿರುವುದರಿಂದ ಮಲೆನಾಡು ಪ್ರದೇಶವಿರುವುದರಿಂದ ತೋಟಗಾರಿಕಾ ಬೆಳೆಗಳಿಗೆ ನಮ್ಮಲ್ಲಿ ಅತಿಹೆಚ್ಚಿನ ಅವಕಾಶಗಳಿರುವುದರಿಂದ ಕೂಡಲೇ ಅಲ್ಲಿ ಸಿಬ್ಬಂದಿಗಳನ್ನು ನೇಮಿಸಬೇಕು ಮತ್ತು ಜೋಯಿಡಾದಲ್ಲಿ ಸಹಾಯಕ ನಿರ್ದೇಶಕರಿಗೆ ಉಳಿದುಕೊಳ್ಳುವುದಕ್ಕಾಗಿ ವಸತಿ ಗೃಹದ ವ್ಯವಸ್ಥೆಯನ್ನು ಮಾಡಿಕೊಡಬೇಕು ಮತ್ತು ದಾಸ್ತಾನು ಕೊಠಡಿಗಳನ್ನು ಆದಷ್ಟು ಶೀಘ್ರವಾಗಿ ದುರಸ್ತಿ ಮಾಡಿಸುವಂಥ ಕೆಲಸವಾಗಬೇಕೆಂದು ತೋಟಗಾರಿಕಾ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಎಸ್.ಎ. ರವೀಂದ್ರನಾಥ್ : ಮಾನ್ಯ ಅಧ್ಯಕ್ಷರೆ, ರಿಪೇರಿ ಮಾಡಿಸುವಂಥ ಕೆಲಸವನ್ನು ಈ ಸಾರಿ ಮಾಡಿಸುತ್ತೇನೆ. ಇನ್ನು ಹುದ್ದೆಗಳ ಬಗ್ಗೆ ಹೇಳಬೇಕೆಂದರೆ, ಈಗಾಗಲೇ 850 ಹುದ್ದೆಗಳು ಮಂಜೂರಾಗಿದ್ದು ಅದರಲ್ಲಿ 399 ಹುದ್ದೆಗಳನ್ನು ಈಗಾಗಲೇ ಭರ್ತಿ ಮಾಡಿದ್ದೇವೆ. ಈ ಹುದ್ದೆಗಳಲ್ಲಿ ಇರತಕ್ಕಂಥವರಲ್ಲಿ ಯಾರು ಕಾರವಾರ ಜಿಲ್ಲೆಗೆ ಹೋಗುತ್ತಾರೋ ಎಲ್ಲರನ್ನೂ ಅಲ್ಲಿಗೆ ಕಳುಹಿಸಿಕೊಟ್ಟು ಪೂರ್ತಿ ಭರ್ತಿ ಮಾಡುವಂಥ ಕೆಲಸ ಮಾಡಿ ಅಲ್ಲಿ ತೋಟಗಾರಿಕೆ 90% ಗಿಂತಲೂ ಹೆಚ್ಚಿಗೆ ಇರುವುದರಿಂದ ಅಲ್ಲಿ ಹೆಚ್ಚಿನ ಆದ್ಯತೆಯನ್ನು ಕೊಡುವಂಥ ಕೆಲಸವನ್ನು ಮಾಡುತ್ತೇನೆ.

ಮೀನುಗಾರಿಕೆ ಉತ್ಪಾದನೆಯಿಂದ ಬಂದ ಆದಾಯ

62 (121) ಶ್ರೀ ಗೂಳಿಹಟ್ಟಿ ಡಿ. ಶೇಖರ್ (ಹೊಸದುರ್ಗ) : ಮೀನುಗಾರಿಕೆ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:–

ಅ) ಚಿತ್ರದುರ್ಗ ಜಿಲ್ಲೆ ವಾಣಿವಿಲಾಸ ಜಲಾಶಯದಲ್ಲಿ ಮೀನುಗಾರಿಕೆ, ಉತ್ಪಾದನೆ ವಿತರಣೆಯಿಂದ ಕಳೆದ ಮೂರು ವರ್ಷಗಳಿಂದ ಬಂದ ಆದಾಯವೆಷ್ಟು; ಪ್ರತಿವರ್ಷ ಗುತ್ತಿಗೆ ನೀಡಲು ಅವಕಾಶವಿದೆಯೇ; ಈ ಸಾರಿ ಗುತ್ತಿಗೆ ಯಾರಿಗೆ ನೀಡಲಾಗಿದೆ; ಗುತ್ತಿಗೆ ನೀಡಿಕೆಯಲ್ಲಿ ನಿಯಮ ಮೀರಿ ಗುತ್ತಿಗೆ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಜಲಾಶಯದಲ್ಲಿ ಮೀನು ಉತ್ಪಾದನೆ ನಿರ್ವಹಣೆ ಇದನ್ನೇ ನಂಬಿಕೊಂಡ ಮೀನು ಸಾಕಾಣಿಕೆ ಮಾರಾಟಗಾರರ ಸಂಖ್ಯೆ ಎಷ್ಟು;

ಆ) ಈ ಜಲಾಶಯದಲ್ಲಿ ಮೀನುಮರಿ ಸಾಕಾಣಿಕೆ, ನಿರ್ವಹಣೆ, ಮಾರಾಟ ಇತ್ಯಾದಿ ಚಟುವಟಿಕೆಗೆ ಇತ್ತೀಚೆಗೆ ನೀಡಿದ ಸರ್ಕಾರಿ ಆದೇಶ ಹಿಂಪಡೆದು ಹೊಸ ನಿಯಮಾನುಸಾರ ಆದೇಶ ಹೊರಡಿಸುವ ಉದ್ದೇಶ ಸರ್ಕಾರದ ಮುಂದೆ ಇದೆಯೇ; ಯಾವಾಗ ಆದೇಶ ಹೊರಡಿಸಲಾಗುವುದು; (ವಿವರ ನೀಡುವುದು)

ಇ) ಹೊಸದುರ್ಗ ತಾಲ್ಲೂಕಿನಲ್ಲಿರುವ ಮೀನುಗಾರರ ಸಂಖ್ಯೆ ಎಷ್ಟು;

ಈ) ಎಷ್ಟು ಕೆರೆಗಳಲ್ಲಿ ಮೀನು ಉತ್ಪಾದನೆಯಾಗುತ್ತದೆ; ಇದರಿಂದ ಬರುವ ವಾರ್ಷಿಕ ಲಾಭವೆಷ್ಟು;

ಉ) ಗುತ್ತಿಗೆ ನೀಡಲು ಅನುಸರಿಸುವ ಕ್ರಮಗಳೇನು;